## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ.ಎಸ್.ಕೃಷ್ಣಮೂರ್ತಿ ಸಹಾಯಕ ಕೃಷಿ ಅಧಿಕಾರಿ, ಇವರು ಹಿಂದಿನ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ ಚಿಕ್ಕನಾಯಕನಹಳ್ಳಿ, ಇವರ ವಿರುದ್ಧ ಶಿಸ್ತು ಕ್ರಮ.

**ಓದಲಾಗಿದೆ:**

1) ಸಮಾಜ ಕಲ್ಯಾಣ ಆಯುಕ್ತರ ಪತ್ರ ಸಂ: ಸಕನಿ/ಸಿಬ್ಬಂದಿ-10/ಸಿಆರ್-09/2008-09. ದಿನಾಂಕ: 05-09-2011.
2) ಸರ್ಕಾರ ಕಾರಣ ಕೇಳುವ ಪತ್ರ ಸಂಖ್ಯೆ: ಕೃಇ/65/ಕೃಪವಿ/2011, ದಿನಾಂಕ: 27-12-2011.
3) ಶ್ರೀ.ಎಸ್.ಕೃಷ್ಣಮೂರ್ತಿಯವರ ಹೇಳಿಕೆ ದಿನಾಂಕ: 29-12-2011.

**ಪ್ರಸ್ತಾವನೆ:**

ಶ್ರೀ.ಎಸ್.ಕೃಷ್ಣಮೂರ್ತಿ ಸಕೃಅ (ನಿವೃತ್ತ) ಇವರು ಈ ಹಿಂದೆ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಯಾಗಿ ಚಿಕ್ಕನಾಯಕನಹಳ್ಳಿಯಲ್ಲಿ ಕರ್ತವ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ತಮ್ಮ ಕರ್ತವ್ಯ ದುರುಪಯೋಗಪಡಿಸಿಕೊಂಡು Self Check ಅಡಿಯಲ್ಲಿ ಹಣ ಡ್ರಾ ಮಾಡಿ, ಹಣ ದುರುಪಯೋಗಪಡಿಸಿಕೊಂಡಿರುತ್ತಾರೆಂದು ಅವರನ್ನು ಸಮಾಜ ಕಲ್ಯಾಣ ಇಲಾಖೆಯಲ್ಲಿ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಶ್ರೀ.ಕುಕ್ಕಾಜೆ ರಾಮಕೃಷ್ಣ ಭಟ್, ನಿವೃತ್ತ ಜಿಲ್ಲಾ ಮತ್ತು ಸೆಷನ್ ನ್ಯಾಯಾಧೀಶರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿರುತ್ತಾರೆ. ಪ್ರಕರಣದಲ್ಲಿ ಸದರಿಯವರ ಮೇಲೆ ಹೊರಿಸಿರುವ 7 ಆರೋಪಗಳ ಮೇಲೆ ವಿಚಾರಣೆ ನಡೆಸಿದ ವಿಚಾರಾಣಾಧಿಕಾರಿಗಳು ತಮ್ಮ ವರದಿಯಲ್ಲಿ ಸದರಿ ಆರೋಪಗಳು ರುಜುವಾತಾಗಿರುವುದಿಲ್ಲವೆಂದು ನಿರ್ಣಯ ನೀಡಿರುತ್ತಾರೆ.

ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರು ವಿಚಾರಾಣಾಧಿಕಾರಿಗಳ ನಿರ್ಣಯವನ್ನು ಈ ಕೆಳಕಂಡ ಕಾರಣಗಳ ಮೇಲೆ ಒಪ್ಪದೇ ಅವರಿಗೆ ಸೂಕ್ತ ದಂಡನ ವಿಧಿಸುವ ಅಗತ್ಯತೆಯಿದೆಯೆಂದು ಅಭಿಪ್ರಾಯಪಟ್ಟಿರುತ್ತಾರೆ.

1. ಶ್ರೀ.ಎಸ್.ಕೃಷ್ಣಮೂರ್ತಿ ಇವರು ತಾಂತ್ರಿಕ ಸಹಾಯಕರಾಗಿ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಂತಹ ಸಂದರ್ಭದಲ್ಲಿ 2002-03ನೇ ಸಾಲಿನಲ್ಲಿ ಗಿರಿಜನ ಉಪಯೋಜನೆಯಡಿ ಕೃಷಿ ಅಭಿವೃದ್ಧಿಗಾಗಿ ಬಿಡುಗಡೆಗೊಳಿಸಿದ ಹಣದಲ್ಲಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕಸಬಾ ಹೋಬಳಿ ದುಗುಡಿಹಳ್ಳಿ ಗ್ರಾಮದ ಪರಿಶಿಷ್ಠ ವರ್ಗದವರಾದ ಶ್ರೀ.ಚಿಕ್ಕಣ್ಣ ಬಿನ್ ಲಕ್ಕಣ್ಣ ಹಾಗೂ ಇವರ ಇಬ್ಬರು ಸಹೋದರರಾದ ಶ್ರೀ.ಲಕ್ಷ್ಮಯ್ಯ ಮತ್ತು ಶ್ರೀ.ರಾಮಯ್ಯ ಇವರುಗಳಿಗೆ ಜಮೀನಿನ ಸರ್ವೆ ನಂ.38,39 ರಲ್ಲಿ ಸಮಪಾತಳಿ ನಿರ್ಮಿಸುವುದಕ್ಕೆ ತಲಾ ರೂ.9000/- ದಂತೆ 3 ಜನರಿಗೆ ಒಟ್ಟು ರೂ.27,000/- ಗಳನ್ನು ಚೆಕ್ ಸಂ: 0895985 ದಿ: 13-02-2004 ರ ಮೂಲಕ ಶ್ರೀ.ಚಿಕ್ಕಣ್ಣ ಇವರಿಗೆ ನೀಡಿರುತ್ತಾರೆ. ಇದಕ್ಕೆ ಸಂಬಂಧಿಸಿದ ಕಡತದಲ್ಲಿ ನಿಯಮಾನುಸಾರ ಟಿಪ್ಪಣಿ ಹಾಳೆಗಳನ್ನು ನಿರ್ವಹಿಸುವ ಬಗ್ಗೆಯಾಗಲೀ ಮೇಲಾಧಿಕಾರಿಗಳಿಂದ ಫಲಾನುಭವಿ ಪಟ್ಟಿಗೆ ಅನುಮೋದನೆಯಾಗಲೀ ಪಡೆಯದೇ ಕರ್ತವ್ಯದಲ್ಲಿ ನಿರ್ಲಕ್ಷ್ಯತನ ವಹಿಸಿರುತ್ತಾರೆ.

2. 2003-04ನೇ ಸಾಲಿನಲ್ಲಿ ಗಿರಿಜನ ಉಪಯೋಜನೆಯಡಿ ಸ್ಪ್ರಿಂಕ್ಲರ್‌ಸೆಟ್ ವಿತರಣೆಗಾಗಿ ರೂ.70,000/- ಹಣ ಬಿಡುಗಡೆಯಾಗಿದ್ದು, ಸ್ಪ್ರಿಂಕ್ಲರ್‌ಸೆಟ್‌ಗಳನ್ನು ಮೇಲಾಧಿಕಾರಿಗಳ ಅನುಮೋದನೆ ಪಡೆದು ಕಡಿಮೆ ದರ ನಮೂದಿಸಿದ ಸಂಸ್ಥೆಯಿಂದ ಖರೀದಿಸಬೇಕಿದ್ದರೂ ಸಹ, ಈ ಅಧಿಕಾರಿಗಳು ಕೊಟೇಷನ್ ಕರೆಯದೇ ಮೆ: ರೈನ್‌ಬೋ ಇರಿಗೇಷನ್ ಲಿಮಿಟೆಡ್ ಬೆಂಗಳೂರುರವರಿಂದ 7 ಸ್ಪ್ರಿಂಕ್ಲರ್‌ಸೆಟ್‌ಗಳನ್ನು ಖರೀದಿಸಿದ್ದು, ಸದರಿ ಸಂಸ್ಥೆಗೆ ಹಣವನ್ನು ಸಹ

..2..

ಪಾವತಿಸಿ, 4 ಫಲಾನುಭವಿಗಳಿಗೆ ಮಾತ್ರ ವಿತರಿಸಿ ಸರ್ಕಾರದ ಹಣವನ್ನು ನಿಯಮಬಾಹಿರವಾಗಿ ವೆಚ್ಚ ಭರಿಸಿ ಕರ್ತವ್ಯಲೋಪವೆಸಗಿರುತ್ತಾರೆ.

3. 2003-04ನೇ ಸಾಲಿನಲ್ಲಿ ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ಯೋಜನೆಯ ಬ್ಯಾಂಕ್ ಲೆಕ್ಕವಿರುವ ಎಸ್.ಬಿ.ಎಂ. ಚಿಕ್ಕನಾಯಕನಹಳ್ಳಿ ಉಳಿತಾಯ ಖಾತೆ ಸಂ: 01100050710 ರಿಂದ ಚೆಕ್ ಸಂ: 003540901, ದಿ: 07-04-2004 ರಂದು ರೂ.1,25,000/- ಗಳನ್ನು ಸ್ವಂತಕ್ಕೆ ಡ್ರಾ ಮಾಡಿಕೊಂಡು, ನಂತರ ದಿ: 16-08-2004 ರಲ್ಲಿ ರೂ.90,000/- ಗಳನ್ನು ಮತ್ತು ದಿ: 26-08-2004 ರಂದು ರೂ.35,000/- ಗಳು ಒಟ್ಟು ರೂ. 1,25,000/- ಗಳನ್ನು ವಾಪಸ್ಸು ಬ್ಯಾಂಕಿಗೆ ಜಮೆ ಮಾಡುವ ಮೂಲಕ ಸರ್ಕಾರದ ಹಣವನ್ನು ತಾತ್ಕಾಲಿಕವಾಗಿ ದುರುಪಯೋಗಪಡಿಸಿಕೊಂಡಿರುತ್ತಾರೆ.
4. 2003-04ನೇ ಸಾಲಿನಲ್ಲಿ ಟಿ.ಎಸ್.ಪಿ ಯೋಜನೆಯಡಿ ಹೈನುಗಾರಿಕೆಗಾಗಿ ರೂ.30,000/- ಗಳ ಅನುದಾನ ಬಿಡುಗಡೆಯಾಗಿದ್ದು, 3 ಫಲಾನುಭವಿಗಳಿಗೆ ರೂ.10,000/- ರಂತೆ ಸಹಾಯಧನ ನೀಡಿರುತ್ತಾರೆ. ಆದರೆ ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಮೇಲಾಧಿಕಾರಿಗಳ ಅನುಮೋದನೆ ಪಡೆಯುವ ಬಗ್ಗೆಯಾಗಲೀ ಹಾಗೂ ಟಿಪ್ಪಣಿ ಹಾಳೆಗಳನ್ನು ನಿರ್ವಹಿಸುವ ಬಗ್ಗೆಯಾಗಲೀ ಕ್ರಮವಹಿಸದೇ ನಿರ್ಲಕ್ಷ್ಯತನ ವಹಿಸಿರುತ್ತಾರೆ.
5. 2003-04ನೇ ಸಾಲಿನಲ್ಲಿ ಟಿ.ಎಸ್.ಪಿ ಯೋಜನೆಯಡಿ ಇಬ್ಬರು ಮಹಿಳಾ ಫಲಾನುಭವಿಗಳಿಗೆ ತಲಾ ರೂ.10,000/- ದಂತೆ ಒಟ್ಟು ರೂ.20,000/- ಗಳ ಸಹಾಯಧನ ವಿತರಿಸಿದ್ದು, ಸದರಿ ಫಲಾನುಭವಿಗಳ ಪಟ್ಟಿಗೆ ಮೇಲಾಧಿಕಾರಿಗಳ ಅನುಮೋದನೆ ಪಡೆಯಬೇಕಾಗಿದ್ದರೂ ಸಹ ಅನುಮೋದನೆ ಪಡೆಯದೇ ಏಕಪಕ್ಷೀಯವಾಗಿ ಕ್ರಮ ಕೈಗೊಂಡಿರುತ್ತಾರೆ.
6. ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಯರಿಗೆ ಪ್ರೋತ್ಸಾಹಧನ ವಿತರಿಸುವ ಸಂಬಂಧ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ತುಮಕೂರು ಇವರಿಂದ ರೂ.1,15,000/- ಗಳ ಹಣ ಬಿಡುಗಡೆಯಾಗಿದ್ದು, ಅಧಿಕಾರಿಗಳು ಸದರಿ ಮೊತ್ತವನ್ನು ಕಲ್ಪತರು ಗ್ರಾಮೀಣ ಬ್ಯಾಂಕ್, ಚಿಕ್ಕನಾಯಕನಹಳ್ಳಿ ತಾಲ್ಲೂಕು ಇಲ್ಲಿ ನಿರ್ವಹಿಸಲಾಗುತ್ತಿರುವ ಬ್ಯಾಂಕ್ ಖಾತೆ ಸಂ: 10030 ಕ್ಕೆ ಜಮೆ ಮಾಡಿರುತ್ತಾರೆ. ಸದರಿ ಮೊತ್ತದಲ್ಲಿ 13 ಶಾಲೆಗಳಿಗೆ 13 ಚೆಕ್ಕುಗಳ ಮುಖೇನ ರೂ. 56,000/- ಗಳ ಪ್ರೋತ್ಸಾಹಧನ ಮಂಜೂರಾತಿ ಮಾಡಿರುವುದಾಗಿ ದಾಖಲಿಸಿರುತ್ತಾರೆ. ಆದರ ಸರ್ಕಾರಿ ಪ್ರೌಢಶಾಲೆ, ಬರಸಿಡ್ಲಹಳ್ಳಿ ಇಲ್ಲಿಗೆ ಬರೆಯಲಾದ ಚೆಕ್ ಸಂ: 491507ರಲ್ಲಿ ರೂ.9,500/- ಗಳು ಮಾತ್ರ ಬ್ಯಾಂಕ್‌ನಲ್ಲಿ ನಗಧೀಕರಣವಾಗಿರುವುದು ಕಂಡುಬಂದಿದ್ದು, ಉಳಿದ ಮೊತ್ತವನ್ನು ವಿತರಣೆ ಮಾಡಿರುವುದಕ್ಕೆ ಯಾವುದೇ ಮಾಹಿತಿ ಇಟ್ಟಿರುವುದಿಲ್ಲ
7. 2003-04ನೇ ಸಾಲಿನಲ್ಲಿ ಕಲ್ಪತರು ಗ್ರಾಮೀಣ ಬ್ಯಾಂಕ್ ಖಾತೆಯಿಂದ ತಮ್ಮ ಹಾಗೂ ಬೇನಾಮಿ ಹೆಸರಿನಲ್ಲಿ ಹಣ ಡ್ರಾ ಮಾಡುವ ಮುಖಾಂತರ ತಾತ್ಕಾಲಿಕವಾಗಿ ದುರುಪಯೋಗಪಡಿಸಿಕೊಂಡು, ಸದರಿ ಮೊತ್ತದಲ್ಲಿ ರೂ.90,000/- ಗಳನ್ನು ಬ್ಯಾಂಕ್ ಖಾತೆಗೆ ಜಮಾ ಮಾಡಿ ಉಳಿದ ಮೊತ್ತ ರೂ.20,000/- ಗಳಿಗೆ ಯಾವುದೇ ಮಾಹಿತಿ ಇಟ್ಟಿಲ್ಲದ ಕಾರಣ ಅವರ ಕಾರ್ಯಾವಧಿಯಲ್ಲಿ ರೂ.20,000/- ಗಳನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ.

ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರು ಮೇಲ್ಕಂಡಂತೆ ವಿಚಾರಣಾಧಿಕಾರಿಗಳ ವರದಿಯ ಮೇಲೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ, ಶ್ರೀ.ಎಸ್.ಕೃಷ್ಣಮೂರ್ತಿ, ಸಕೃಅ ಇವರು ರೂ. 20,000.00 ಗಳನ್ನು ದುರುಪಯೋಗಪಡಿಸಿಕೊಂಡಿದ್ದರಿಂದ ಸದರಿ ಮೊತ್ತವನ್ನು ಅವರಿಂದ ವಸೂಲಿ ಮಾಡುವುದಲ್ಲದೇ, ಅವರನ್ನು ಸೇವೆಯಿಂದ ತೆಗೆದುಹಾಕುವ ಕಠಿಣ ದಂಡನೆಯನ್ನು ವಿಧಿಸುವ ಬಗ್ಗೆ ಕ್ರಮ ಕೈಗೊಳ್ಳುವಂತೆ ಮೇಲೆ ಕ್ರ.ಸಂ. 1 ರಲ್ಲಿ ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

..3..

ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರು ವ್ಯಕ್ತಪಡಿಸಿರುವ ಅಭಿಪ್ರಾಯದ ಹಿನ್ನಲೆಯಲ್ಲಿ ಶ್ರೀ.ಎಸ್.ಕೃಷ್ಣಮೂರ್ತಿಯವರಿಗೆ ಎರಡನೇ ಕಾರಣ ಕೇಳುವ ಪತ್ರವನ್ನು ಮೇಲೆ ಕ್ರ.ಸಂ. 2 ರಲ್ಲಿ ಓದಲಾದ ಪತ್ರದಲ್ಲಿ ಜಾರಿ ಮಾಡಿ ಈ ಬಗ್ಗೆ ತಮ್ಮ ಹೇಳಿಕೆಯನ್ನು ನೀಡುವಂತೆ ತಿಳಿಸಲಾಗಿದೆ. ಶ್ರೀ.ಎಸ್.ಕೃಷ್ಣಮೂರ್ತಿಯವರು ಸದರಿ ನೋಟೀಸಿಗೆ ಉತ್ತರವನ್ನು ನೀಡಿ ತಮ್ಮ ಮೇಲಿನ ಆರೋಪಗಳನ್ನು ಅಲ್ಲಗೆಳೆದಿರುತ್ತಾರೆ ಹಾಗೂ ತಮ್ಮನ್ನು ಆರೋಪ ಮುಕ್ತಗೊಳಿಸಿ ನೀಡಿರುವ ವಿಚಾರಣಾಧಿಕಾರಿಗಳ ವರದಿಯನ್ನು ಒಪ್ಪಿ ದೋಷಮುಕ್ತರನ್ನಾಗಿ ಮಾಡುವಂತೆ ಕೋರಿರುತ್ತಾರೆ. ಸದರಿಯವರ ಹೇಳಿಕೆಗಳನ್ನು ಸಮಾಜ ಕಲ್ಯಾಣ ಇಲಾಖೆಯ ಅಭಿಪ್ರಾಯದೊಂದಿಗೆ ಪರಿಶೀಲಿಸಲಾಗಿ ಇವರು ಈಗಾಗಲೇ ಸೇವೆಯಿಂದ ನಿವೃತ್ತರಾಗಿರುವುದರಿಂದ ಅವರನ್ನು ಸೇವೆಯಿಂದ ತೆಗೆದುಹಾಕುವ ದಂಡನೆಯನ್ನು ವಿಧಿಸಲು ಸಾಧ್ಯವಿಲ್ಲ. ಆದ್ದರಿಂದ ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರು ವ್ಯಕ್ತಪಡಿಸಿರುವ ಅಂಶಗಳ ಹಿನ್ನಲೆಯಲ್ಲಿ ಸದರಿಯವರಿಂದ ನಷ್ಟವಾದ ಸರ್ಕಾರದ ಹಣ ರೂ.20,000/– ಗಳನ್ನು ಸದರಿಯವರ ನಿವೃತ್ತಿ ಉಪದಾನಗಳಿಂದ ವಸೂಲು ಮಾಡುವ ಬಗ್ಗೆ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ/65/ಕೃಪವಿ/2011, ದಿನಾಂಕ: 06–06–2012, ಬೆಂಗಳೂರು.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ ಶ್ರೀ.ಎಸ್.ಕೃಷ್ಣಮೂರ್ತಿ ಸಹಾಯಕ ಕೃಷಿ ಅಧಿಕಾರಿ, ಹಿಂದಿನ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ ಚಿಕ್ಕನಾಯಕನಹಳ್ಳಿ (ಈಗ ನಿವೃತ್ತಿ) ಇವರಿಂದ ಸರ್ಕಾರಕ್ಕೆ ನಷ್ಟವಾಗಿದೆ ಎನ್ನಲಾದ ಮೊತ್ತ ರೂ.20,000/– ಗಳನ್ನು ಸದರಿಯವರ ನಿವೃತ್ತಿ ಉಪದಾನಗಳಿಂದ ವಸೂಲು ಮಾಡುವಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ.

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

ಇವರಿಗೆ:–

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
3. ಆಯುಕ್ತರು, ಕೃಷಿ ಇಲಾಖೆ, ಬೆಂಗಳೂರು.
4. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
5. ಸಂಬಂಧಿಸಿದ ಅಧಿಕಾರಿಗಳು (ಆಯುಕ್ತರು,ಕೃಷಿ ಇಲಾಖೆ ಇವರ ಮೂಲಕ).
6. ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಇವರ ಆಪ್ತ ಕಾರ್ಯದರ್ಶಿ.
7. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು
8. ಸರ್ಕಾರದ ಉಪ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಇವರ ಆಪ್ತ ಸಹಾಯಕರು.
9. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.